1917-2017

100 Years of Excellence in Education

ಕೆ.ಸಿ.ಡಿ. ಸಮಾಚಾರ

ಶಿಕ್ಷಣ-ಸಂಸ್ಕೃತಿ-ಸಮಾಜ ನಮ್ಮ ಧ್ಯೇಯ, ನಿಷ್ಠೆ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

KCD JOURNALISM CLUB DHARWAD

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ: 8 ಸಂಪುಟ: 2 ಪುಟ: 1


## "ಕೆಸಿಡಿ ಯಲ್ಲಿ ಮತದಾನ ದಿನದ ದಿನಾಚರಣೆ"

# ಮತದಾನ ಎಲ್ಲರ ಹಕ್ಕು: ಮೇಜರ್ ಸಿದ್ಧಲಿಂಗಯ್ಯ ಹಿರೇಮಠ

ಜಾತಿ, ಹಣ, ಭಾಷೆ ಮತ್ತು ಧರ್ಮದ ಆಧಾರದ ಮೇಲೆ ಮತ ಚಲಾಯಿಸುವುದು ಕಾನೂನು ಬಾಹಿರ ಆದ್ದರಿಂದ ಸೂಕ್ತ ವ್ಯಕ್ತಿಗೆ ಮತ ಹಾಕುವುದರ ಮೂಲಕ ದೇಶದ ಅಭಿವೃದ್ಧಿಗೆ ಕೈ ಜೋಡಿಸಬೇಕು ಎಂದು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಆಯುಕ್ತ ಮೇಜರ್ ಸಿದ್ದಲಿಂಗಯ್ಯ ಹಿರೇಮಠ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೆನ್ ಸಭಾಂಗಣದಲ್ಲಿ ಭಾರತೀಯ ಚುಣಾವಣಾ ಆಯೋಗ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಮತ್ತು ಕರ್ನಾಟಕ ಕಲಾ ಮಹಾವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಮತದಾನ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತಿದ್ದರು. ಭಾರತವು ಜಗತ್ತಿನಲ್ಲಿ ಅತಿ ಪ್ರಾಚೀನ ಸಂಸ್ಕೃತಿಯ ಇತಿಹಾಸವನ್ನು ಹೊಂದಿದ್ದು, ಇದು ಮೂರು ಸಾವಿರ ವರ್ಷಗಳ ಇತಿಹಾಸ ಹೊಂದಿದ ದೇಶವು ಸರ್ವರಿಗೆ ಸಮಾನತೆ ಐಕ್ಯತೆಯ ಪ್ರತೀಕವಾದ ದೇಶವಾಗಿದೆ ಎಂದ ಅವರು ನೂರಾರು ಯುವಕ ಯುವತಿಯರ ಬಲಿದಾನ ಫಲವಾಗಿ ನಮಗೆ ಸ್ವಾತಂತ್ರ್ಯ ದೊರಕಿದೆ. ಆದ್ದರಿಂದ ದೇಶವನ್ನು ಸುಂದರವಾಗಿ ಕಟ್ಟಲು ಇಂದು ಸಂವಿಧಾನವು ಮಹತ್ವದ ಪಾತ್ರ ವಹಿಸಿದೆ. ಅದರ ಫಲವಾಗಿ ಚುನಾವಣಾ ಆಯೋಗವು ಒಂದು ಸಂವಿಧಾನಾತ್ಮಕವಾದ ಸಂಸ್ಥೆಯಾಗಿದ್ದು, ಪ್ರತಿ ವರ್ಷ ಜನವರಿ 25 ರಂದು ಮತದಾರರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ಈ ದಿನಾಚರಣೆಯ ಮುಖ್ಯ ಉದ್ದೇಶವೆಂದರೆ ಜನರಲ್ಲಿ ಚುನಾವಣೆಗಳ ಕುರಿತು ಅರಿವು ಮತ್ತು ಜಾಗೃತಿ ಮೂಡಿಸುವುದಾಗಿದೆ. ಆದ್ದರಿಂದ್ದ ಇಂದು ನಮ್ಮ ಯುವಜನರು ಉತ್ತಮ ಚಾರಿತ್ರ್ಯ ಹೊಂದಿದ ಸೂಕ್ತ ವ್ಯಕ್ತಿಗಳನ್ನು ಚುನಾಯಿಸಬೇಕಾದ ಗುರುತವಾದ ಜವಾಬ್ದಾರಿ ಹೊಂದಿದ್ದಾರೆ, ಆದ್ದರಿಂದ



ಮತದಾನ ದಿನದ ದಿನಾಚರಣೆಯ ಕಾರ್ಯಕ್ರಮವನ್ನು ಕೆಸಿಡಿ ಕಾಲೇಜಿನ ಫ್ಯಾರೇನ್ ಸಭಾಂಗಣದಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಆಯುಕ್ತ ಮೇಜರ ಸಿದ್ದಲಿಂಗಯ್ಯ ಹಿರೇಮಠ ಉದ್ಘಾಟಿಸುತ್ತಿರುವದು. ಚುನಾವಣಾ ಅಧಿಕಾರಿ ಎಂ ಆರ್ ಕುಲಕರ್ಣಿ, ಕೆಸಿಡಿ ಪ್ರಾಚಾರ್ಯರಾದ ಡಾ.ಎಸ್.ಎಸ್ ಕಟ್ಟಿಮನಿ, ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೋ.ಸಿ.ಎಸ್ ಪಾಟೀಲ್ ಚಿತ್ರದಲ್ಲಿ ಕಾಣಬಹುದು.

ಎಲ್ಲರು ಕಡ್ಡಾಯವಾಗಿ ದೇಶದ ಹಿತದೃಷ್ಟಯಿಂದ ಮತದಾನದಂತಹ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಚುನಾವಣಾ ಆಯೋಗವು ಇಂದು ಪರಿಪಕ್ವವಾಗಿ ಪಾರದರ್ಶಕತೆಯಿಂದ ತಂತ್ರಜ್ಞಾನದ ಅಳವಡಿಸಿಕೊಂಡು ಇಂದು ಚುನಾವಣೆಗಳನ್ನು ನಡೆಸುತ್ತಿದೆ. ಆದ್ದರಿಂದ ಮತದಾನ ಮಾಡುವುದು ಭಾರತದ ಪ್ರತಿಯೊಬ್ಬ ಭಾರತೀಯನ ಹಕ್ಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಕರ್ನಾಟಕ ಕಾನೂನು ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ಸಿ ಎಸ್ ಪಾಟೀಲ ಮಾತನಾಡಿ ಇಂದು ಭಾರತದ ಪ್ರತಿಯೊಬ್ಬ ಪ್ರಜೆಯು ಮತದಾನ ಮಾಡುವುದರ ಮೂಲಕ ನಮ್ಮ ಸಂವಿಧಾನಕ್ಕೆ ನೀಡಿದ ಗೌರವವಾಗಿದೆ. ಆದ್ದರಿಂದ ಇಂದು ಯುವಜನರ ಮೇಲೆ ಅತಿ ಹೆಚ್ಚಿನ ಜವಾಬ್ದಾರಿ ಇರುವುದರಿಂದ ಅವರು ಶಿಸ್ತು ಸಂಯಮ ರೂಢಿಸಿಕೊಳ್ಳುವುದು ಅವಶ್ಯಕವಾಗಿದೆ ಇಂದಿನ ಯುವಕರು ಸಂವಿಧಾನದ ಆಶಯದ ಅನುಸಾರವಾಗಿ ನಡೆದು ಕೊಳ್ಳಬೇಕು ಎಂದ ಅವರು ದೇಶ ಕಟ್ಟುವಲ್ಲಿ ಸಹಕಾರ ನೀಡಬೇಕು ಎಂದು ಸಲಹೆ ನೀಡದರು. ಇಂದು ಜಗತ್ತಿನಲ್ಲಿ ಭಾರತದ ಅತಿ ದೊಡ್ಡ ಪ್ರಜಾಪ್ರಭುತ್ವ ಹೊಂದಿದ ದೇಶವಾಗಿದ್ದು, ಚುನಾವಣೆಯಂತಹ ಪ್ರಕ್ರಿಯೆಗಳಲ್ಲಿ ಎಲ್ಲರು ಭಾಗವಹಿಸುವುದರ ಜೊತೆಗೆ ಮತ್ತೊಬ್ಬರಿಗೆ ಮತದಾನದ ಅರಿವನ್ನು ಮೂಡಿಸಲು ಪ್ರಯತ್ನಿಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಸುಭಾಷ್ ಎಸ್. ಕಟ್ಟಿಮನಿ ಮಾತನಾಡಿ ಇಂದು ನಮಗೆ ಸಂವಿಧಾನವು ಅನೇಕ ಹಕ್ಕುಗಳನ್ನು ನೀಡಿದ್ದು, ಅವುಗಳನ್ನು ನಾವು ಸಮರ್ಪಕವಾಗಿ ಪಾಲಿಸಬೇಕಾದ ಅವಶ್ಯಕತೆ ಇದೆ ಎಂದರು. ಭಾರತದಂತಹ ದೇಶ ಬಡತನ, ನಿರೂದ್ಯೋಗ, ಅಸಹಿಷ್ಣುತೆ ಮತ್ತು ಆತಂಕವಾದಂತಹ ಸಮಸ್ಯೆಗಳಿಂದ ಕೂಡಿದೆ .ಆದರೂ ಈ ದೇಶವು ತನ್ನದೇ ಆದ ಘನತೆ ವಿಶೇಷತೆಯನ್ನು ಹೊಂದಿದೆ ಎಂದು ಮಾರ್ಮಿಕವಾಗಿ ನುಡಿದರು.

ಕಾರ್ಯಕ್ರಮದಲ್ಲಿ ಹೆಸರು ನೋಂದಾಯಿಸಿದ ಜನರಿಗೆ ಮತದಾನದ ಗುರುತಿನ ಚೀಟಿಯನ್ನು ಮೇಜರ್ ಸಿದ್ದಲಿಂಗಯ್ಯ ವಿತರಿಸಿದರು ಮತ್ತು ವಲಯ ಚುನಾವಣಾ ಅಧಿಕಾರಿಗಳಿಗೆ ಪ್ರಶಂಸೆಯ ಪ್ರಮಾಣ ಪತ್ರಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಸಿಬ್ಬಂದಿ ವರ್ಗ ಹಾಜರಿದ್ದರು. ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ.ಬಿ.ಎಸ್.ಭಜಂತ್ರಿ ಅತಿಥಿಗಳನ್ನು ಸ್ವಾಗತಿಸಿದರು. ಪ್ರಾಧ್ಯಪಕ ಡಾ.ಎಂ. ಬಿ. ದಳಪತಿ ಕಾರ್ಯಕ್ರಮವನ್ನು ನಿರೂಪಿಸದರೆ, ಚುನಾವಣಾ ಅಧಿಕಾರಿ ಎಂ. ಆರ್. ಕುಲಕರ್ಣಿ ವಂದಿಸಿದರು.

## "ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಯುವಸಪ್ತಾಹದಲ್ಲಿ ಕೆಸಿಡಿ ವಿದ್ಯಾರ್ಥಿಗಳು"

ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ 154ನೇ ಜನ್ಮದಿನೋತ್ಸವದ ಅಂಗವಾಗಿ ಬುಧವಾರದಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ರಾಷ್ಟ್ರೀಯ ಯುವ ಸಪ್ತಾಹ ಕಾರ್ಯಕ್ರಮದ ಸಮಾರೋಪ ಸಮಾರಂಭಕ್ಕೆ ಕರ್ನಾಟಕ ಕಲಾ ಮಹಾವಿದ್ಯಾಲಯ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಪದವಿ ಮತ್ತು ಸ್ನಾತ್ತಕೋತ್ತರ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಮತ್ತು ಹತ್ತು ಜನ ಶಿಕ್ಷಕ ಸಿಬ್ಬಂದಿಯ ಜೊತೆಗೆ ದಿನಾಂಕ 16 ಮಂಗಳವಾರ ರಾತ್ರಿ 10:30 ಘಂಟೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಐದು ಬಸ್ಸುಗಳಲ್ಲಿ 250 ವಿದ್ಯಾರ್ಥಿಗಳು ಬೆಂಗಳೂರಿಗೆ ತೆರಳಿದರು. ಈ ಸಂದರ್ಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ ಎಂ ಎನ್ ಜೋಶಿ ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್‌ರಾದ ಪ್ರೊ.



ಕ.ವಿ.ವಿ ಕುಲಸಚಿವರಾದ ಪ್ರೋ.ಎಂ.ಎನ್.ಜೋಶಿ ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್‌ರಾದ ಪ್ರೋ.ಪಿ.ಎಂ. ಹೊನಕೇರಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್.ಎಸ್.ಕಟ್ಟಿಮನಿ, ಉಪ ಪ್ರಾಚಾರ್ಯರಾದ ಶ್ರೀಮತಿ ಡಾ. ರಾಜೇಶ್ವರಿ ಮಹೇಶ್ವರಯ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಮೂಲಿಮನಿ ಬೆಂಗಳೂರಿನಲ್ಲಿ ನಡೆಯುವ ರಾಷ್ಟ್ರೀಯ ಯುವಸಪ್ತಾಹದ ಸಮಾರೋಪ ಸಮಾರಂಭಕ್ಕೆ ವಿದ್ಯಾರ್ಥಿಗಳನ್ನು ಬಿಳ್ಕೊಟ್ಟರು.

ಪಿ ಎಂ ಹೊನಕೇರಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್ ಎಸ್ ಕಟ್ಟಿಮನಿ ಉಪ ಪ್ರಾಚಾರ್ಯರಾದ ಶ್ರೀಮತಿ ಡಾ. ರಾಜೇಶ್ವರಿ ಮಹೇಶ್ವರಯ್ಯ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಮೂಲಿಮನಿ ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕರಾದ ಡಾ. ಪ್ರಭಾಕರ ಕಾಂಬಳೆ ಮತ್ತು ವಿನಾಯಕ ಎತ್ತಿನಮನಿ ವಿದ್ಯಾರ್ಥಿಗಳನ್ನು ಬಿಳ್ಕೊಟ್ಟರು. ಈ ಸಂದರ್ಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಸಿ. ಕೃಷ್ಣಮೂರ್ತಿ ಡಾ. ಸಂ-ಜಯಕುಮಾರ ಮಾಲಗತ್ತಿ ಡಾ. ಗುರುರಾಜ ಹಡಗಲಿ ಹಾಗೂ ಕರ್ನಾಟಕ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಎಸ್ ಬಿ ಭಜಂತ್ರಿ ಡಾ. ಸ್ಟೆಲ್ಲಾ ಸ್ಟಿವನ್ ಡಾ. ಕೀರ್ತಿ ಡಾ. ವಾಯ. ಎಸ್. ರಾವುತ್ ಪ್ರೋ ವೀರೇಂದ್ರ ಯಾದವ ಡಾ. ರಾಜಪ್ಪ ಇತರರು ವಿದ್ಯಾರ್ಥಿಗಳ ಜತೆ ಪ್ರಯಾಣ ಬೆಳಸಿದರು.

## ಕೆ.ಸಿ.ಡಿ. ವಿದ್ಯಾರ್ಥಿ ರಾಷ್ಟ್ರ ಮಟ್ಟದಲ್ಲಿ ಪ್ರಥಮ ಸ್ಥಾನ



ಕರ್ನಾಟಕ ಕಲಾ ಮಹಾವಿದ್ಯಾಲಯದ ದೈಹಿಕ ನಿರ್ದೇಶಕ ಮಂಜುನಾಥ ಅಸುಂಡಿ, ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ, ಪದಕ ವಿಜೇತ ಮಹೇಶ ಏರಿಮನಿ ಹಾಗೂ ಜಿಮಖಾನ ಸಿಬ್ಬಂದಿ ಶ್ರೀಮತಿ ಎನ್. ರೇಖಾ ಶೇಖರ ಹೋಸಮನಿ ಚಿತ್ರದಲ್ಲಿ ಇದ್ದಾರೆ.

ಕರ್ನಾಟಕ ಕಲಾ ಮಹಾವಿದ್ಯಾಲಯದ ಬಿ.ಎ. ಪ್ರಥಮ ವರ್ಷದ ವಿದ್ಯಾರ್ಥಿ ಮಹೇಶ ರಾಮಣ್ಣ ಏರಿಮನಿ ಅವರು ಭೋತಾನದ ಪೆಂಥುಶಿಲಾಂಗ್‌ನಲ್ಲಿ ಜನೇವರಿ 20 ರಿಂದ 23 ವರೆಗೆ ನಡೆದ 2016-17 ಸಾಲಿನ ಮೂರನೇ ದಕ್ಷಿಣ ಏಷಿಯಾ ಅಟ್ಯಾ ಪಟ್ಯಾ ಚಾಂಪಿಯನ್‌ಶಿಪ್ ಓಲಂಪಿಕ್ಸ್ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿ ರಾಷ್ಟ್ರ ಮಟ್ಟದಲ್ಲಿ ಪ್ರಥಮ ಸ್ಥಾನಗಳಸಿದ್ದಾನೆ. ಇವರು ಮೂಲತ ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಹುರಳಿಕೋಪ್ಪ ಗ್ರಾಮದವನಾಗಿದ್ದಾನೆ. ಮಹೇಶ ಸಾಧನೆಗೆ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ಉಪ್ರಾಚಾರ್ಯ ಡಾ ರಾಜೇಶ್ವರಿ ಮಹೇಶ್ವರಯ್ಯ ಹಾಗೂ ಕಾಲೇಜಿನ ಶಿಕ್ಷಕ ವೃಂದವು ಮಹೇಶನನ್ನು ಅಭಿನಂದಿಸಿದ್ದಾರೆ.


ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ.ಈಶ್ವರ್ ಗೌಡ ಪಾಟೀಲ್, ವಿದ್ಯಾರ್ಥಿ ಸಂಪಾದಕರು: ಸುನೀಲ, ಸ್ವಾತಿ,ನಿತಿನ್. ಪುಟ ವಿನ್ಯಾಸ: ಶ್ರೀಹರಿ.